ನಾಚಿದಳು. ಅಷ್ಟರಲ್ಲಿ ಬಾಗಿಲು ತೆರೆದುಕೊಂಡು ದಾಸಿ ಒಳಗೆ ಬಂದಳು.

ಇವರೀರ್ವರೂ ಹೊರಬಿದ್ದದ್ದನ್ನು ಕೊಠಡಿಯ ಬಾಗಿಲಿನಲ್ಲಿದ್ದ ದ್ವಾರಪಾಲಕ ಅಚ್ಚರಿಯಿಂದ ನೋಡಿದ. 'ರಾಜಕುಮಾರಿಯವರಿಗೆ ಉದ್ಯಾನವನದಲ್ಲಿ ಕೆಲಹೊತ್ತು ಕಳೆಯುವ ಇಚ್ಛೆಯಾಗಿದೆ' ಎಂದಳು ದಾಸಿ. ಆತ ಅಚ್ಚರಿಯಿಂದ ನೋಡಿದನಾದರೂ ಏನೂ ಹೇಳಲಿಲ್ಲ. ಉದ್ಯಾನವನದಲ್ಲಿ ತಂಗಾಳಿ ಬೀಸುತ್ತಿತ್ತು. ಒಂದಷ್ಟು ಹೊತ್ತು ಒಳ ಸಾಗಿದ ಮೇಲೆ ಕಾರಂಜಿಯ ಕಟ್ಟೆಯ ಹತ್ತಿರ ಅವನು ನಿಂತಿದ್ದ. ರಾಜಕುಮಾರಿ ಮೆಲ್ಲಮೆಲ್ಲನೇ ಹೆಜ್ಜೆಯಿಡುತ್ತ ಮುಂದೆ ಸಾಗಿದಂತೆ ದಾಸಿ ಹಿಂದುಳಿದಳು.

ಹೃದಯವನ್ನು ಕೈಯಲ್ಲಿ ಹಿಡಿದಂತೆ ರಾಜಕುಮಾರಿ ಅವನತ್ತ ಹೆಜ್ಜೆ ಹಾಕಿದಳು. ಅವನೂ ಒಂದೆರೆಡು ಹೆಜ್ಜೆ ಮುಂದೆ ಬಂದ. ಅನೇಕ ಬಾರಿ ನೋಟಗಳ ವಿನಿಮಯವಾಗಿದ್ದರೂ ಸಂಧಿಸುತ್ತಿರುವುದು ಮೊದಲ ಬಾರಿ. ಇಬ್ಬರಿಗೂ ಇದು ಹೊಸತು. ರಾಜಕುಮಾರಿಗೆ ಏನು ಹೇಳಬೇಕು ಎಂದು ತಿಳಿಯಲಿಲ್ಲ. ಅವನೇ 'ರಾಜಕುಮಾರಿ ಇದು ತರವಲ್ಲ, ನನಗೂ ನಿಮಗೂ ಎಲ್ಲಿಯ ಸಾಮ್ಯ?' ಎಂದ. ಆಗ ರಾಜಕುಮಾರಿ 'ಯೋಧ, ಪ್ರೇಮ ಕುರುಡು. ನಿನಗೆ ನಾನು ನನ್ನ ಹೃದಯ ಕೊಟ್ಟಾಗಿದೆ. ನಿರಾಕರಿಸುವೆಯಾ?' ಎಂದಳು. ಅವನು ಉತ್ತರ ಕೊಡುವ ಮುನ್ನವೇ ಅವನನ್ನು ಆಲಂಗಿಸಿದಳು. ಅವನು ಸಾವರಿಸಿಕೊಳ್ಳುತ್ತಾ ಬಿಡಿಸಿಕೊಳ್ಳಲು ಪ್ರಯತ್ನಿಸಿದನಾದರೂ ಮನಸ್ಸು ಒಪ್ಪಲಿಲ್ಲ. ಹಾಗೆಯೇ ಕೆಲ ಕ್ಷಣಗಳು ಕಳೆದಿರಬಹುದು. 'ಯಾರಲ್ಲಿ? ಬಂಧಿಸಿ ಈ ಸೈನಿಕನನ್ನು' ಮಹಾರಾಣಿಯ ಧ್ವನಿ ಕೇಳಿದೊಡನೆಯೇ ಇಬ್ಬರೂ ಎಚ್ಚೆತ್ತುಕೊಂಡರು. ಖಡ್ಗಧಾರಿ ಸೈನಿಕರು ಬಂದು ಆತನನ್ನು ಎಳೆದೊಯ್ದರು.

ರಾಜಕುಮಾರಿಯನ್ನು ಹೆಚ್ಚು ಕಡಿಮೆ ಎಳೆದುಕೊಂಡೇ ಹೋದಳು ಮಹಾರಾಣಿ. ಆಕೆಯ ಕೊಠಡಿಯತ್ತ ಹೋಗುವಾಗ ಅಲ್ಲಿದ್ದ ದ್ವಾರಪಾಲಕನತ್ತ ತಿರುಗಿ 'ನೀನು ಹೇಳಿದ್ದು ಸರಿ. ಉದ್ಯಾನವನದಲ್ಲಿ ಅವನಿದ್ದ' ಎಂದಳು. ರಾಜಕುಮಾರಿ ಅವನನ್ನು ಕೆಂಗಣ್ಣಿನಿಂದ ನೋಡಿದಳು. ರಾಜಕುಮಾರಿಯ ಯಾವುದೇ ಮಾತನ್ನು ಕೇಳದೆ ಮಹಾರಾಣಿ ಆಕೆಯನ್ನುಕೊಠಡಿಯ ಒಳಗೆ ತಳ್ಳಿ ಹೊರಟಳು. 'ಯಾರನ್ನೂ ಒಳಗೆ ಬಿಡಬೇಡ' ದ್ವಾರಪಾಲಕನಿಗೆ ಸೂಚನೆ ಕೊಡಲಾಯಿತು. ಮುಂದೆ ಸ್ವಲ್ಪ ಹೊತ್ತಿನಲ್ಲಿ ಮತ್ತೊಬ್ಬ ದ್ವಾರಪಾಲಕ ಮತ್ತು ಮಹಾರಾಣಿಯ ಅಂತಃಪುರದ ದಾಸಿ ಅಲ್ಲಿಗೆ ಬಂದರು. ಕೊಠಡಿಯಲ್ಲಿ ರಾಜಕುಮಾರಿ ಒಂದೇ ಸಮನೆ ರೋದಿಸುತ್ತಿದ್ದಳು.

ಅರಮನೆಯ ಸಭಾಂಗಣದಲ್ಲಿ ಕೆಲವೇ ಆಪ್ತರ ಸಮ್ಮುಖದಲ್ಲಿ ಸಭೆ ಸೇರಿತ್ತು. ಮಹಾರಾಜರು ಬರುತ್ತಿದ್ದಂತೆ ಎಲ್ಲರೂ ಎದ್ದು ನಿಂತರು. 'ಎಳೆದು ತನ್ನಿ ಆ ಧೂರ್ತನನ್ನು' ಎಂದು ಅಬ್ಬರಿಸಿದರು ಮಹಾರಾಜರು. ಮುಂದಿನ ಕೆಲವೇ ನಿಮಿಷಗಳಲ್ಲಿ ಕಬ್ಬಿಣದ ಸರಪಳಿಗಳಿಂದ ಬಂಧಿತನಾದ ಯೋಧನನ್ನು ಸಭಾಂಗಣದತ್ತ ಎಳೆದು ತರಲಾಯಿತು. 'ನೀನು ವೀರ ಯೋಧನೆಂದು ನಿನ್ನನ್ನು ಸನ್ಮಾನಿಸಿದ್ದೆ. ರಾಜಕುಮಾರಿಯ ಮೇಲೆ ಕಣ್ಣು ಹಾಯಿಸುವಷ್ಟು ಧೈರ್ಯವೇ ನಿನಗೆ?'

ಈಗಾಗಲೇ ಬಿದ್ದ ಪೆಟ್ಟುಗಳಿಂದ ರಕ್ತ ಜಿನುಗುತ್ತಿತ್ತು 'ಪ್ರಭು, ಇದರಲ್ಲಿ ನನ್ನ ಯಾವ ತಪ್ಪೂ ಇಲ್ಲ. ಕ್ಷಮಿಸಿ. ರಾಜಕುಮಾರಿಯವರ ಸಂದೇಶವನ್ನು ಮನ್ನಿಸಿ ನಾನಲ್ಲಿಗೆ ಹೋದೆ... ಆದರೆ...'

'ಮುಚ್ಚು ಬಾಯಿ' ಮತ್ತೊಮ್ಮೆ ಅಬ್ಬರಿಸಿದ ಮಹಾರಾಜ. 'ಎಳೆದೊಯ್ಯಿರಿ ಇವನನ್ನು, ಗಲ್ಲಿಗೇರಿಸಿ.'

'ಬೇಡ...' ಚೀರಿದ ದನಿಯೊಂದು ಕೇಳಿ ಬಂತು. ಬಿಚ್ಚುಗೂದಲಿನ ರಾಜಕುಮಾರಿ ಓಡಿ ಬರುತ್ತಿದ್ದಳು. ಅವಳ ಹಿಂದೆ ರಾಜಭಟರು ಓಡೋಡಿ ಬರುತ್ತಿದ್ದರು. 'ತಪ್ಪು ನನ್ನದು. ನಾನೇ ಯೋಧನ ಶೌರ್ಯಕ್ಕೆ ಮಾರುಹೋಗಿದ್ದೆ. ಅವನಿಗದರ ಅರಿವೂ ಇರಲಿಲ್ಲ. ಅವನಿಗೆ ಮರಣದಂಡನೆಯನ್ನು ವಿಧಿಸಿದರೆ ನಾನೂ ಜೀವಂತವಾಗಿ ಉಳಿಯುವುದಿಲ್ಲ'. ಆಕೆಯ ಮಾತನ್ನು ಕೇಳಿದ ಮಹಾರಾಜ ಒಂದು ಕ್ಷಣ ಮೌನವಾದ. ಅಷ್ಟರಲ್ಲಿ ಮಹಾರಾಣಿಯೂ ಅಲ್ಲಿಗೆ ಬಂದಳು. ಮಗಳನ್ನು ತಬ್ಬಿ ಹಿಡಿದು ಮಹಾರಾಜನತ್ತ ಕೈ ಮುಗಿದಳು. ಒಂದು ಕ್ಷಣ ಅಲ್ಲಿ ಮೌನ ಆವರಿಸಿತು.

ಮಹಾರಾಜ ಮಂತ್ರಿಯತ್ತ ತಿರುಗಿದ, 'ಹಾಗಾದರೆ ಇವನಿಗೇನು ಶಿಕ್ಷೆ?'

'ಮಹಾಪ್ರಭು, ಅವನನ್ನು ನಮ್ಮ ಬೆಟ್ಟದ ಕಾಡುಗಳಲ್ಲಿರುವ ಕೆಲಸಗಳಿಗೆ ಕಳಿಸಬಹುದು'.

ಮಂತ್ರಿಯ ಕಣ್ಣುಗಳಲ್ಲಿಯೇ ಏನೋ ಸಂದೇಶವಿದ್ದದ್ದು ಗಮನಿಸಿದ ಮಹಾರಾಜ 'ಹಾಗೆಯೇ ಆಗಲಿ' ಎಂದು ನುಡಿದ. ರಾಜಕುಮಾರಿ ಮತ್ತು ಮಹಾರಾಣಿ ಅಲ್ಲಿಂದ ನಡೆದರು. ಅಲ್ಲಿಂದ ಹೊರಡುವ ಮುನ್ನ ಕೊನೆಯ ಬಾರಿಗೆ ಎಂಬಂತೆ ಒಮ್ಮೆ ಅವನತ್ತ ತಿರುಗಿ ನೋಡಿದಳು. ಅವನ ಊದಿದ ಕಣ್ಣುಗಳಲ್ಲಿ ಯಾತನೆಯನ್ನುಳಿದು ಯಾವುದೇ ಭಾವವಿರಲಿಲ್ಲ.

***

'ರಾಜಕುಮಾರೀ' ಎನ್ನುತ್ತಾ ಬಂದ ಆಕೆಯ ಸಖಿ ಅವಳನ್ನು ತಬ್ಬಿ ಹಿಡಿದಳು. 'ಸಖೀ, ಅವನನ್ನು ಮರಣ ದಂಡನೆಯಿಂದ ಪಾರು ಮಾಡಿದೆ' ಎಂದಳು. 'ಇಲ್ಲ ರಾಜಕುಮಾರಿ, ಇದು ಮರಣ ದಂಡನೆಗಿಂತ ಕಠಿಣ ಶಿಕ್ಷೆ. ಮಾಚುಪಿಚುವಿನ ಆ ಕಾಡುಗಳಲ್ಲಿ ಅದೇನು ಕೆಲಸವೋ ನಾನರಿಯೆ. ಆದರೆ ಅಲ್ಲಿ ಹೋದವರೆಲ್ಲ ಕೆಲವೇ ದಿನಗಳಲ್ಲಿ ಸತ್ತುಹೋಗುತ್ತಾರೆ. ಅಲ್ಲಿ ಅತ್ಯಂತ ಕಷ್ಟಕರವಾದ ಪರೀಕ್ಷೆಗಳನ್ನು ನಡೆಸುತ್ತಾರಂತೆ'. ಈ ಮಾತುಗಳನ್ನು ಕೇಳಿದ ರಾಜಕುಮಾರಿಯ ಹೃದಯವೇ ಒಡೆದು ಹೋದಂತಾಯಿತು.

ಅಷ್ಟರಲ್ಲಿ ಸೈನಿಕನನ್ನು ಕಾಡಿಗೆ ಕಳಿಸುವ ಪ್ರಕ್ರಿಯೆ ಆರಂಭವಾದುದರ ಸಂಕೇತವಾಗಿ ಗದ್ದಲ ಕೇಳಿ ಬಂತು. ರಾಜಕುಮಾರಿ ಮತ್ತೆ ಸಭಾಂಗಣದತ್ತ ಓಡಿದಳು. ಅವನ ಸಮವಸ್ತ್ರವನ್ನು ಕಸಿದುಕೊಳ್ಳಲಾಯಿತು. ಅವನಿಗೆ ಕೈದಿಯ ಉಡುಪನ್ನು ತೊಡಿಸಲಾಯಿತು. ಅವನಿಗೆ ಕೊಟ್ಟಿದ್ದ ಸನ್ಮಾನಗಳನ್ನು ಸಹ ಮರಳಿ ಪಡೆಯಲಾಗಿತ್ತು. ಅವನ ಸಹಸೈನಿಕರೆಲ್ಲ ಅಳುತ್ತಿದ್ದರು. ಅವನನ್ನು ದರದರನೇ ಎಳೆದೊಯ್ದರು. ರಾಜಕುಮಾರಿಯೂ ಅವನ ಹಿಂದೆಯೇ ಓಡಿದಳು. ಅವಳನ್ನು ಯಾರೂ ತಡೆಯಲಿಲ್ಲ.

ಅವನು ಮುಂದೆ ಹೋದಂತೆ ರಾಜಕುಮಾರಿ ಅಳುತ್ತಾ ಹಿಂದೆ ಓಡಿ ಓಡಿ ಹೋಗುತ್ತಿದ್ದಳು. ಅವನು ಕಾಲಿಟ್ಟಲ್ಲೆಲ್ಲ ಆಕೆಯ ಕಣ್ಣೀರ ಹನಿಗಳು ಬಿದ್ದವು. ಆಕೆಯ ಕಣ್ಣೀರ ಹನಿಗಳು ಬಿದ್ದಲೆಲ್ಲಾ ಸುಂದರವಾದ ಹೂವುಗಳು ಅರಳಿದವು. ಮಾಚುಪಿಚುವಿನ ಕಾಲು ಹಾದಿಯಗುಂಟ ಹುಟ್ಟಿದ ಆ ಗಿಡದಲ್ಲಿ ಅರಳಿದ ಹೂಗಳನ್ನು ಜನ ಅಚ್ಚರಿಯಿಂದ ನೋಡಿದರು. ರಾಜಕುಮಾರಿಗೇನಾಯಿತು? ಅವನಿಗೇನಾಯಿತು ಎನ್ನುವುದು ಯಾರಿಗೂ ಗೊತ್ತಾಗಲಿಲ್ಲ. ಆದರೆ ಅವರ ಅಮರ ಪ್ರೇಮದ ಸಂಕೇತವಾಗಿ ಆ ಹೂವುಗಳು ಇಂದಿಗೂ ಅರಳುತ್ತಲೇ ಇವೆ.

ಪೆರುವಿನ ಮಾಚುಪಿಚು ಬೆಟ್ಟವನ್ನು ಹತ್ತುವವರಿಗೆ ಹಾದಿಯಗುಂಟ 'ವಕಾಂಕೆ' ಆರ್ಕಿಡ್‌ಗಳು ಕಂಡುಬರುತ್ತವೆ. ಇಂಕಾಗಳ ಕೆಚುವಾ ಭಾಷೆಯಲ್ಲಿ 'ವಕಾಂಕೆ' ಎಂದರೆ 'ನೀನಳುವೆ' ಎಂದಂತೆ. ಸುಂದರವಾದ ಕೇಸರಿ ಬಣ್ಣದ ಒಂದೇ ಒಂದು ಹೂತಳೆಯುವ ಇವು ಇಂದಿಗೂ ರಾಜಕುಮಾರಿಯ ಕಣ್ಣೀರಿನ ಪ್ರತೀಕವಾಗಿ ಅಲ್ಲಿ ಅರಳುತ್ತಿವೆ. ವೈಜ್ಞಾನಿಕವಾಗಿ 'ಮೆಸಡೆವಾಲಿಯಾ ವಿಕ್ಟ್ರೈನಾ' ಎಂದು ಗುರುತಿಸುವ ಇವು ಜಗತ್ತಿನ ಮತ್ತೊಂದು ಅಮರ ಪ್ರೇಮದ ಸಂಕೇತವಾಗಿವೆ.

